# ಕರ್ನಾಟಕ ವಿಧಾನ ಪರಿಷತ್ತು

1. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಅಡಗೂರ್ ಹೆಚ್.ವಿಶ್ವನಾಥ್
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 898
3. ಉತ್ತರಿಸಬೇಕಾದ ದಿನಾಂಕ : 17.12.2024
4. ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸಹಕಾರ ಸಂಘಗಳ ಬೈಲಾ ತಿದ್ದುಪಡಿಗೆ ಇರುವ ಮಾನದಂಡಗಳೇನು: | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕರಣ 12 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು1960 ರ ನಿಯಮ 6 ರಲ್ಲಿ ಸಹಕಾರ ಸಂಘದ ಉಪವಿಧಿಗಳ (ಬೈಲಾ) ತಿದ್ದುಪಡಿಗೆ ಮಾನದಂಡಗಳನ್ನು ನಿಗದಿಪಡಿಸಲಾಗಿದ್ದು, ಮಾಹಿತಿಯನ್ನು **ಅನುಬಂಧ- 'ಅ'** ರಲ್ಲಿ ನೀಡಲಾಗಿದೆ. |
| (ಆ) | ಒಂದು ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯನ್ನು ಬೈಲಾ ತಿದ್ದುಪಡಿ ಮಾಡಿ ವಿವಿಧ ಉದ್ದೇಶಗಳ ಸಹಕಾರಿ ಸಂಘ ಎಂದು ಅನುಮತಿ ನೀಡಲು ಇರುವ ಮಾನದಂಡಗಳೇನು: | ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯನ್ನು ಬೈಲಾ ತಿದ್ದುಪಡಿ ಮಾಡಿ ವಿವಿಧ ಉದ್ದೇಶಗಳ ಸಹಕಾರಿ ಸಂಘ ಎಂದು ಅನುಮತಿ ನೀಡಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕರಣ 12 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 6 ರಲ್ಲಿ ಮಾನದಂಡಗಳನ್ನು ನಿಗದಿಪಡಿಸಲಾಗಿರುತ್ತದೆ. ಮಾಹಿತಿಯನ್ನು **ಅನುಬಂಧ -'ಅ'** ರಲ್ಲಿ ನೀಡಲಾಗಿದೆ.<br><br>ಸಹಕಾರ ಸಂಘಗಳ ನಿಬಂಧಕರ ಕಛೇರಿ ಸಂಖ್ಯೆ: ಆರ್‌ಎಸ್‌ಆರ್/ಎಕ್ಸ್‌ಎಂಸಿ/144/2014-15, ಸುತ್ತೋಲೆ ಸಂಖ್ಯೆ:243ರ, ದಿನಾಂಕ:09.12.2014ರ, ಮೂಲಕ ವಿವಿಧೋದ್ದೇಶ ಸಹಕಾರ ಸಂಘ ನೋಂದಣಿ ಕುರಿತು ಕೆಲವು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಮಾಹಿತಿಯನ್ನು **ಅನುಬಂಧ -'ಆ'** ರಲ್ಲಿ ನೀಡಲಾಗಿದೆ. |
| (ಇ) | ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ ಪ್ರಕರಣಗಳಿಗೆ ಉದ್ದೇಶ ಪೂರ್ವಕವಾಗಿ ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರದ ಕ್ರಮಗಳೇನು: | ಸಹಕಾರ ಸಂಘಗಳಿಂದ ಉಪವಿಧಿಗಳ ತಿದ್ದುಪಡಿಗಾಗಿ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ಉದ್ದೇಶ ಪೂರ್ವಕವಾಗಿ ವಿಳಂಬ ನೀತಿ ಅನುಸರಿಸಿರುವ ಪ್ರಕರಣಗಳು ಯಾವುದೂ ಇರುವುದಿಲ್ಲ. |

| | | |
|---|---|---|
| (ಈ) | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕಾರ, ಬೈಲಾ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸಿದ 3 ತಿಂಗಳ ಅವಧಿಯೊಳಗೆ ಸಹಕಾರ ಸಂಘಗಳ ನಿಬಂಧಕರು ಅನುಮೋದನೆ ನೀಡಬೇಕಿರುವುದು ಕಡ್ಡಾಯವೆ: | ಸ್ವೀಕೃತಗೊಂಡ ತಿದ್ದುಪಡಿ ಪ್ರಸ್ತಾವನೆಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕರಣ 12(2) ಹಾಗೂ ನಿಯಮ 6 ಕ್ಕೆ ಅನುಗುಣವಾಗಿ ಇದ್ದಲ್ಲಿ ಪ್ರಸ್ತಾವನೆ ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಸಹಕಾರ ಸಂಘಗಳ ನಿಬಂಧಕರು ಅನುಮೋದನೆ ನೀಡಬೇಕಿರುವುದು ಕಡ್ಡಾಯವಾಗಿರುತ್ತದೆ. |
| (ಉ) | ಸಹಕಾರ ಸಂಘಗಳ ನಿಬಂಧಕರು ನಿರ್ದಿಷ್ಟ ಅವಧಿಯೊಳಗೆ ಬೈಲಾ ತಿದ್ದುಪಡಿಗೆ ಅನುಮೋದನೆ ನೀಡದಿದ್ದರೆ, ಆ ಒಂದು ಸಹಕಾರಿ ಸಂಘದ ಬೈಲಾ ತನ್ನಷ್ಟಕ್ಕೆ ತಾನೇ ಅನುಮೋದನೆ ಸಿಕ್ಕಂತೆ (By it is deemed to be automatically approved) ಎನ್ನುವುದಕ್ಕೆ ಸರ್ಕಾರದ ಸ್ಪಷ್ಟನೆ ಏನು? (ಸ್ಪಷ್ಟೀಕರಣ ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕರಣ 12(2-ಎ) ರನ್ವಯ ಸಹಕಾರ ಸಂಘಗಳ ನಿಬಂಧಕರು, ಉಪನಿಯಮ (ಬೈಲಾ) ತಿದ್ದುಪಡಿ ಪ್ರಸ್ತಾವನೆಯನ್ನು "ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ವಿಲೇ ಮಾಡಲು ಸಾಧ್ಯವಾಗದಿದ್ದರೆ, ಸದರಿ ಉಪವಿಧಿಗಳ ತಿದ್ದುಪಡಿಯು ನೋಂದಾಯಿಸಲ್ಪಟ್ಟಿದೆ" ಎಂದು ಭಾವಿಸತಕ್ಕದ್ದು ಎಂದು ಕಾಯ್ದೆಯಲ್ಲಿರುತ್ತದೆ. |

**ಸಂಖ್ಯೆ: ಸಿಒ 186 ಸಿಎಲ್‌ಎಂ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

**ವಿಧಾನ ಪರಿಷತ್ ಸದಸ್ಯರಾದ ಶ್ರೀ. ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:898 ರ ಉಪಪ್ರಶ್ನೆ (ಅ) ಮತ್ತು (ಆ)ಗೆ ಅನುಬಂಧ-ಅ**

**12. ಸಹಕಾರ ಸಂಘದ ಉಪವಿಧಿಗಳ ತಿದ್ದುಪಡಿ -** [(1) ಪ್ರತಿಯೊಂದು ಸಹಕಾರ ಸಂಘವು ಕಾಲಕಾಲಕ್ಕೆ ಈ ಅಧಿನಿಯಮದ ಮತ್ತು ಅದರಡಿ ಮಾಡಲಾದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ತನ್ನ ಉಪವಿಧಿಗಳನ್ನು ತಿದ್ದುಪಡಿ ಮಾಡಬಹುದು:

ಪರಂತು, ಪ್ರತಿಯೊಂದು ಸಹಕಾರ ಸಂಘವು ಈ ಅಧಿನಿಯಮಕ್ಕೆ ಅಥವಾ ನಿಯಮಗಳಿಗೆ ಕಾಲಕಾಲಕ್ಕೆ ಮಾಡಲ್ಪಟ್ಟ ತಿದ್ದುಪಡಿಗಳಿಗೆ ಅನುಸಾರವಾಗಿ ಸದರಿ ತಿದ್ದುಪಡಿಗಳು ಜಾರಿಗೆ ಬರುವ ದಿನಾಂಕದಿಂದ ತೊಂಭತ್ತು ದಿನಗಳೊಳಗೆ ತನ್ನ ಉಪವಿಧಿಗಳಿಗೆ ಅಗತ್ಯವಾದ ತಿದ್ದುಪಡಿಗಳನ್ನು ಮಾಡತಕ್ಕದ್ದು.]

(1-2) ಅಂಥ ತಿದ್ದುಪಡಿಯ ಪ್ರತಿಯೊಂದು ಪ್ರಸ್ತಾವದ ಜೊತೆಗೆ ಗೊತ್ತುಪಡಿಸಬಹುದಾದಂಥ ಶುಲ್ಕವು ಇರತಕ್ಕದ್ದು ಮತ್ತು ಸಹಕಾರ ಸಂಘಗಳ ಬೇರೆ ಬೇರೆ ವರ್ಗಕ್ಕೆ ಅಥವಾ ವರ್ಗಗಳಿಗೆ ಬೇರೆ ಬೇರೆ ಫೀಜನ್ನು ಗೊತ್ತುಪಡಿಸಬಹುದು;]

(2) ಅಂಥ ತಿದ್ದುಪಡಿಯ ಪ್ರತಿಯೊಂದು ಪ್ರಸ್ತಾವವನ್ನು ರಿಜಿಸ್ಟ್ರಾರನಿಗೆ ಕಳಿಸತಕ್ಕುದು ಮತ್ತು ಆ ಪ್ರಸ್ತಾವಿತ ತಿದ್ದುಪಡಿಯು-

(i) ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿಲ್ಲವೆಂದು;

(ii) ಸಹಕಾರ ತತ್ವಗಳಿಗೆ ಪ್ರತಿಕೂಲವಾಗಿಲ್ಲವೆಂದು;

(iii) ಸುಭದ್ರ ವ್ಯವಹಾರದ ಅಗತ್ಯತೆಗಳನ್ನು ಈಡೇರಿಸುವುದೆಂದು;

(iv) ಸಂಘದ ಸದಸ್ಯರ ಆರ್ಥಿಕ ಹಿತಾಸಕ್ತಿಗಳನ್ನು ಸಂವರ್ಧಿಸುವುದೆಂದು; ಮತ್ತು

(v) ಸಾಮಾಜಿಕ ನ್ಯಾಯದ ತತ್ವಗಳಿಗೆ ಅಸಂಗತವಾಗಿಲ್ಲವೆಂದು

-ರಿಜಿಸ್ಟ್ರಾರನಿಗೆ ಮನದಟ್ಟಾದರೆ, [ಅವನು ಪ್ರಸ್ತಾವವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ತಿದ್ದುಪಡಿಯನ್ನು ನೋಂದಾಯಿಸತಕ್ಕುದ್ದು].

*[(2-ಎ) ರಿಜಿಸ್ಟ್ರಾರನು (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಅರ್ಜಿಯನ್ನು ವಿಲೇ ಮಾಡಲು ಸಾಧ್ಯವಾಗದಿದ್ದರೆ, ಉಪವಿಧಿಗಳ ತಿದ್ದುಪಡಿಯು ನೋಂದಾಯಿಸಲ್ಪಟ್ಟಿದೆ ಎಂದು ಭಾವಿಸತಕ್ಕುದು.]

[(3) ರಿಜಿಸ್ಟ್ರಾರನು ಯಾವುದೇ ಸಂಘದ ಉಪವಿಧಿಗಳ ತಿದ್ದುಪಡಿಯನ್ನು ನೋಂದಾಯಿಸಿದರೆ ಅಥವಾ ಉಪವಿಧಿಗಳ ತಿದ್ದುಪಡಿಯು ನೋಂದಾಯಿಸಲ್ಪಟ್ಟಿದೆ ಎಂದು ಭಾವಿಸಿದರೆ, ಅವನು ತಾನು ಪ್ರಮಾಣೀಕರಿಸಿದ ತಿದ್ದುಪಡಿಯ ಪ್ರತಿಯನ್ನು ಸಂಘಕ್ಕೆ ನೀಡತಕ್ಕುದು ಮತ್ತು ಅಂಥ ಪ್ರಮಾಣಪತ್ರವು, ಸಂದರ್ಭಾನುಸಾರ, ಉಪ-ವಿಧಿಗಳ ತಿದ್ದುಪಡಿಯನ್ನು ಕ್ರಮಬದ್ಧವಾಗಿ ನೋಂದಾಯಿಸಲಾಗಿದೆ ಅಥವಾ ಅದು ನೋಂದಾಯಿಸಲ್ಪಟ್ಟಿದೆಯೆಂದು ಭಾವಿಸಲಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.]

(4) ರಿಜಿಸ್ಟ್ರಾರನು ಸಹಕಾರ ಸಂಘದ ಉಪವಿಧಿಗಳ ತಿದ್ದುಪಡಿಯನ್ನು ನೋಂದಾಯಿಸಲು ನಿರಾಕರಿಸುವಲ್ಲಿ, ಅವನು ನಿರಾಕರಣೆಯ ಆದೇಶವನ್ನು, ಅದರ ಕಾರಣಗಳ ಸಹಿತ ಸಂಘಕ್ಕೆ ಕಳುಹಿಸತಕ್ಕುದು.

'1' [(5) ರಿಜಿಸ್ಟ್ರಾರನಿಗೆ, [x x x x] ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಜಾರಿಗೊಳಿಸಲು ಸಂಘದ ಉಪವಿಧಿಗಳ ಯಾವುದೇ ತಿದ್ದುಪಡಿಯು ಅವಶ್ಯ ಅಥವಾ ಅಪೇಕ್ಷಣೀಯವೆಂದು ಕಂಡುಬಂದರೆ, ರಿಜಿಸ್ಟ್ರಾರನು, ಆದೇಶದ ಮೂಲಕ ನಿರ್ದಿಷ್ಟಪಡಿಸಿದ ಸಮಯದೊಳಗೆ ನಿಯಮಿಸಬಹುದಾದ ಅಂಥ ರೀತಿಯಲ್ಲಿ ತಾನು ಪ್ರಸ್ತಾವಿಸಿದ ತಿದ್ದುಪಡಿಯನ್ನು ಮಾಡುವಂತೆ ಆ ಸಹಕಾರ ಸಂಘಕ್ಕೆ ನಿರ್ದೇಶಿಸಬಹುದು.

(6) ಸಹಕಾರ ಸಂಘವು, ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಸಮಯದೊಳಗೆ ಅಂಥ ತಿದ್ದುಪಡಿಯನ್ನು ಮಾಡದಿದ್ದರೆ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ರಿಜಿಸ್ಟ್ರಾರನು, ಸಹಕಾರ ಸಂಘಕ್ಕೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಸದರಿ ತಿದ್ದುಪಡಿಯನ್ನು ನೋಂದಾಯಿಸಬಹುದು ಮತ್ತು ಅದರ ಪ್ರತಿಯನ್ನು ತಾನು ಸಹಿ ಮಾಡಿದ ಒಂದು ಪ್ರಮಾಣಪತ್ರದೊಂದಿಗೆ ಸಹಕಾರ ಸಂಘಕ್ಕೆ ಕಳುಹಿಸಿಕೊಡಬಹುದು ಮತ್ತು ತಿದ್ದುಪಡಿಯು ಯುಕ್ತವಾಗಿ ನೋಂದಾಯಿತವಾಗಿದೆ ಎಂಬುದಕ್ಕೆ ಆ ಪ್ರಮಾಣಪತ್ರವು ನಿರ್ಣಾಯಕ ಸಾಕ್ಷ್ಯವಾಗತಕ್ಕದ್ದು.]]

## ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960ರ ನಿಯಮ 6

**6. ಉಪವಿಧಿಗಳ ತಿದ್ದುಪಡಿಗೆ ಸಂಬಂಧಪಟ್ಟ ಕಾರ್ಯವಿಧಾನ** - (1) ಒಂದು ಸಹಕಾರ ಸಂಘವು ತನ್ನ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಿರುವಲ್ಲಿ, ಸಂಘದ ಸಾಮಾನ್ಯ ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಮೂರನೇ ಎರಡು ಬಹುಮತದಿಂದ ಅಂಗೀಕರಿಸಿದ ನಿರ್ಣಯದ ಮೂಲಕವಲ್ಲದೆ ಅಂಥ ಯಾವುದೇ ತಿದ್ದುಪಡಿಗಳನ್ನು ಮಾಡತಕ್ಕುದಲ್ಲ.

(2) ಸಂಘದ ಸದಸ್ಯರಿಗೆ ಉಪವಿಧಿಗಳಿಗನುಸಾರವಾಗಿ [ಹಾಲಿಯಿರುವ ಉಪವಿಧಿಯ ಪಾಠ, ಪ್ರಸ್ತಾಪಿತ ತಿದ್ದುಪಡಿಯ ಪಾಠ ಮತ್ತು ಅದಕ್ಕೆ ಕಾರಣಗಳ ಸ್ಪಷ್ಟ ಹದಿನೈದು ದಿನಗಳ ನೋಟೀಸನ್ನು ಕೊಟ್ಟ ಹೊರತು] ಅಂಥ ಯಾವುದೇ ನಿರ್ಣಯವು ಸಿಂಧುವಾಗತಕ್ಕುದಲ್ಲ.

(3) ಸಂಘವು ತನ್ನ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸುವ ಪ್ರತಿಯೊಂದು ಸಂದರ್ಭದಲ್ಲಿ, ರಿಜಿಸ್ಟ್ರಾರನಿಗೆ-

(ಎ) (1)ನೇ ಉಪ-ನಿಯಮದಲ್ಲಿ ಉಲ್ಲೇಖಿತವಾದ ನಿರ್ಣಯದ ಒಂದು ಪ್ರತಿ;

(ಬಿ) ಈ ಸಂಬಂಧದಲ್ಲಿ ರಿಜಿಸ್ಟ್ರಾರನು ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯ ಪ್ರಸ್ತಾವಿತ ತಿದ್ದುಪಡಿಯ ಪ್ರತಿಗಳು;

[(ಬಿಬಿ) ನಿಬಂಧಕರ (Registrar) ಪರವಾಗಿ ಈ ಕೆಳಗೆ ನಿರ್ದಿಷ್ಟಪಡಿಸಿದ ಶುಲ್ಕವನ್ನು ಪಾವತಿಸಿರುವ ಸಂಬಂಧ ಖಜಾನೆ ಚಲನ್ ಅಥವಾ ಬೇಡಿಕೆ ಹುಂಡಿ

(Demand Draft):

| ಸಹಕಾರ ಸಂಘಗಳ ವ್ಯಾಪ್ತಿ | ಶುಲ್ಕದ ಮೊತ್ತ |
|---|---|
| ಸಹಕಾರ ಸಂಘಗಳ ಪ್ರದೇಶ ಕಾರ್ಯಾಚರಣೆಯು,- | |
| (1) ತಾಲ್ಲೂಕಿಗಿಂತ ಕಡಿಮೆ ಇದ್ದಲ್ಲಿ | ರೂ. 1,000/- |
| (2) ತಾಲ್ಲೂಕು ಮತ್ತು ಅದರ ಮೇಲ್ಪಟ್ಟು ಆದರೆ ಜಿಲ್ಲೆಗಿಂತ ಕಡಿಮೆ ಇದ್ದಲ್ಲಿ | ರೂ.2,500/- |
| (3) ಜಿಲ್ಲೆ ಮತ್ತು ಅದರ ಮೇಲ್ಪಟ್ಟು ಆದರೆ ಪ್ರದೇಶಕ್ಕಿಂತ ಕಡಿಮೆ ಇದ್ದಲ್ಲಿ | ರೂ.5,000/- |
| (4) ಪ್ರದೇಶ ಮತ್ತು ಅದರ ಮೇಲ್ಪಟ್ಟು | ರೂ.12,500/- |

(ಸಿ) (1)ನೇ ಮತ್ತು (2)ನೇ ಉಪ-ನಿಯಮಗಳ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನವನ್ನು ಅನುಸರಿಸಲಾಗಿದೆಯೆಂದು ಸಭೆಯ ಅಧ್ಯಕ್ಷತೆ ವಹಿಸುವ ಪ್ರಾಧಿಕಾರವು ಸಹಿ ಮಾಡಿದ ಒಂದು ಪ್ರಮಾಣಪತ್ರ; ಮತ್ತು

(ಡಿ) ಈ ಸಂಬಂಧದಲ್ಲಿ ರಿಜಿಸ್ಟ್ರಾರನು ಅಗತ್ಯಪಡಿಸಬಹುದಾದಂಥ ಯಾವುದೇ ಇತರ ವಿವರಗಳು;

-ಇವುಗಳನ್ನೊಳಗೊಂಡ ಅರ್ಜಿಯನ್ನು ಸಲ್ಲಿಸತಕ್ಕುದು.

(4) ತಿದ್ದುಪಡಿಯನ್ನು ಯಾವ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾಗಿದೆಯೋ ಆ ಸಾಮಾನ್ಯ ಸಭೆಯ ದಿನಾಂಕದಿಂದ [ಅರವತ್ತು] ದಿನಗಳೊಳಗೆ ಅಂಥ ಪ್ರತಿಯೊಂದು ಅರ್ಜಿಯನ್ನು ಸಲ್ಲಿಸತಕ್ಕದು:

ಪರಂತು, ವಿಳಂಬವೇನಾದರೂ ಆಗಿರುವಲ್ಲಿ, ಅದಕ್ಕೆ ಸಾಕಷ್ಟು ಕಾರಣವಿದ್ದರೆ ರಿಜಿಸ್ಟ್ರಾರನು ಅದನ್ನು ಮನ್ನಾ ಮಾಡಬಹುದು.

(5) ರಿಜಿಸ್ಟ್ರಾರನು, ಸಹಕಾರ ಸಂಘದ ಉಪವಿಧಿಗಳ ತಿದ್ದುಪಡಿಯನ್ನು ನೋಂದಾಯಿಸುವಾಗ, ಅವನು ಅದರ ಒಂದು ಪ್ರತಿಯನ್ನು, ಹಕಾರ ಸಂಘವು ಸಂಯೋಜಿತವಾಗಿರುವ ಹಣ ಒದಗಿಸುವ ಬ್ಯಾಂಕು, ಯಾವುದಾದರೂ ಇದ್ದರೆ, ಅದಕ್ಕೆ ಕಳುಹಿಸತಕ್ಕುದು.

[(6) ಪ್ರಕರಣ 12ರ ಉಪ-ಪ್ರಕರಣ (5)ರಡಿಯಲ್ಲಿ ಸಹಕಾರ ಸಂಘದ ಉಪವಿಧಿಗಳಿಗೆ ನಿಬಂಧಕರು ಯಾವುದೇ ತಿದ್ದುಪಡಿಯನ್ನು ಪ್ರಸ್ತಾಪಿಸಿದಲ್ಲಿ ಸಾಮಾನ್ಯ ಸಭೆಯನ್ನು ಏರ್ಪಡಿಸುವ ಪ್ರಾಧಿಕಾರವು ಅಂತಹ ಪ್ರಸ್ತಾವನೆಯನ್ನು ಸಂದರ್ಭಾನುಸಾರ ವಾರ್ಷಿಕ ಅಥವಾ ವಿಶೇಷ ಸಾಮಾನ್ಯ ಸಭೆಯ ಮುಂದಿಡತಕ್ಕದ್ದು, ಮತ್ತು ಅಂತಹ ಪ್ರಸ್ತಾವನೆಗಳ ಬಗ್ಗೆ ಅಂತಹ ಸಭೆಯಲ್ಲಿ ತೀರ್ಮಾನವನ್ನು ಕೈಗೊಳ್ಳತಕ್ಕದ್ದು ಮತ್ತು ಸಹಕಾರ ಸಂಘವು ನಿಬಂಧಕರು ಪ್ರಕರಣ 12(5)ರನ್ವಯ ನಿರ್ದೇಶಿಸಿದ ತಿದ್ದುಪಡಿಯನ್ನು ಉಪ-ವಿಧಿಗಳಲ್ಲಿ ಜಾರಿಗೆ ತರತಕ್ಕದ್ದು].

**ಸಹಕಾರ ಸಂಘಗಳ ಜಂಟಿ ನಿಬಂಧಕರು**
**(ಕಾನೂನು ಕೋಶ),**
**ಸಹಕಾರ ಸಂಘಗಳ ನಿಬಂಧಕರ ...**
**...ಂ. 1, ಆಲಿ ಅಸ್ಕರ್ ರಸ್ತೆ, ಬೆಂಗಳೂರು-560 052**

ಅನುಬಂಧ -"ಆ"

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1. ಅಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ:ಆರ್‌ಎಸ್‌ಆರ್/ಎಕ್ಸ್‌ಎಂಸಿ/144/2014-15 ದಿನಾಂಕ: 9-12-2014

-: ಸುತ್ತೋಲೆ ಸಂಖ್ಯೆ:-243

ವಿಷಯ;- ವಿವಿಧೋದ್ದೇಶ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಕುರಿತು.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿಯಲ್ಲಿ ನೋಂದಣಿಯಾಗುತ್ತಿರುವ ಸಹಕಾರ ಸಂಘಗಳು 'ವಿವಿದೋದ್ದೇಶ ಸಹಕಾರ ಸಂಘ' ಎಂಬ ಶಿರೋನಾಮೆಯಲ್ಲಿ ಸಹಕಾರ ಸಂಘಗಳನ್ನು ಸಂಘಟಿಸಿ ಅನಗತ್ಯ ಧ್ಯೇಯೋದ್ದೇಶಗಳನ್ನು ಸೇರ್ಪಡೆ ಮಾಡಿಕೊಂಡು, ಗೃಹ ನಿರ್ಮಾಣ, ಪತ್ತು ಮತ್ತು ಇತರೆ ಚಟುವಟಿಕೆಗಳನ್ನು ಸಮ್ಮಿಲನಗೊಳಿಸಿ ದುರ್ಬಳಕೆ ಮಾಡುತ್ತಿರುವುದು ಕಂಡು ಬಂದಿದ್ದು, ಇದು ಸಾರ್ವಜನಿಕರ ಚರ್ಚೆಗೆ ಗ್ರಾಸವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಮಾರ್ಗಸೂಚಿಗಳ ಔಚಿತ್ಯತೆಯನ್ನು ಮನಗಂಡು ಮುಂದಿನ ನಿರ್ದೇಶನಗಳನ್ನು ನೀಡಿದೆ:-

1. ಇನ್ನು ಮುಂದೆ 'ವಿವಿದೋದ್ದೇಶ' ಪದವನ್ನು ಶಿರೋನಾಮೆಯಲ್ಲಿ ಉಪಯೋಗಿಸಿ ಸಹಕಾರ ಸಂಘಗಳನ್ನು ನೋಂದಣಿ ಮಾಡತಕ್ಕದಲ್ಲ. ಆದರೆ ಅವರ ಉದ್ದೇಶದಲ್ಲಿ ಅವರು ವಿವಿಧೋದ್ದೇಶ ಪದವನ್ನು ಬಳಸಬಹುದಾಗಿದೆ.
2. ಗೃಹ ನಿರ್ಮಾಣ ಸಹಕಾರ ಸಂಘಗಳ ಉದ್ದೇಶವು ಗೃಹ ನಿರ್ಮಾಣ ಸಹಕಾರ ಸಂಘಗಳ ಚಟುವಟಿಕೆಗಳಿಗೆ ಸೀಮಿತವಾಗಿರತಕ್ಕದ್ದು.

ಸಂಬಂಧಿಸಿದ ಪ್ರಾಧಿಕಾರಿಗಳು ಸಹಕಾರ ಸಂಘಗಳ ನೋಂದಣಿ, ಉಪವಿಧಿಗಳ ತಿದ್ದುಪಡಿ ಸಂದರ್ಭದಲ್ಲಿ ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕಾರ್ಯನಿರ್ವಹಿಸತಕ್ಕದ್ದು ಹಾಗೂ ಕರಾರುವಕ್ಕಾಗಿ ಕಟ್ಟುನಿಟ್ಟಾಗಿ ಪಾಲನೆ ಮಾಡತಕ್ಕದ್ದು.

(ಡಾ:ಎನ್.ಎಸ್.ಚನ್ನಪ್ಪಗೌಡ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಕೆಳಕಂಡವರಿಗೆ ಕಳುಹಿಸುತ್ತಾ ಸಹಕಾರಿಗಳ ಉಪನಿಯಮಗಳ ತಿದ್ದುಪಡಿ ಸಂದರ್ಭದಲ್ಲಿ ಮೇಲಿನ ನಿರ್ದೇಶನಗಳನ್ನು ಪಾಲನೆ ಮಾಡಲು ಸೂಚಿಸಿದೆ.

1)ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳು
2)ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
3)ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
4)ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
5)ಎಲ್ಲಾ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಗಳು.
6)ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ನಿರ್ಮಾಣ ಭವನ ಡಾ: ರಾಜ್ ಕುಮಾರ್ ರಸ್ತೆ, ಬೆಂಗಳೂರು-560010 ಇವರಿಗೆ ಮಾಹಿತಿಗಾಗಿ.